# ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.
# ಹಿರೇಕೆರೂರು.
## ಸಿ.ಸಿ.ನಂಬರ್ಃ 117/2018

ಸಿಡಬ್ಲ್ಯೂಃ 8

ಪಿಡಬ್ಲ್ಯೂಃ 7

| | | |
|---|---|---|
| ಸಾಕ್ಷಿಯ ಹೆಸರು | : | ಹೇಮಾ ದುಂಡಪ್ಪನವರ |
| ಗಂಡನ ಹೆಸರು | : | ವಿಜಯ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಟೇಲರಿಂಗ್ ಕೆಲಸ |
| ವಾಸಸ್ಥಳ | : | ಕಡೂರು |

ಇಂದು ದಿನಾಂಕಃ 29.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಚಾಸಾ–6, 7, 9 ರಿಂದ 13 ರವರು ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. 1 ನೇ ಆರೋಪಿಯು ಆಟೋ ಡ್ರೈವರ್ ಇರುತ್ತಾರೆ. ಮೃತ ಮಲ್ಲಮ್ಮ ನನಗೆ ಗೊತ್ತು. ಸುಮಾರು 6 ವರ್ಷಗಳ ಹಿಂದೆ ಚಾಸಾ–6 ರವರು ಮಗನ ನಾಮಕರಣ ಕಾರ್ಯಕ್ರಮಕ್ಕೆ ಚಾಸಾ-6 ರವರು ಮಾಡಿದ ಬಾಡಿಗೆ ಆಟೋದಲ್ಲಿ ನಾನು, ನನ್ನ ಮಗಳು ಪೂರ್ವಿಕಾ, ಮೃತ ಮಲ್ಲಮ್ಮ, ಚಾಸಾ–6, 9, 10, 12, 13 ರವರು ಅಬಲೂರಿಗೆ ಹೋಗಿದ್ದೆವು. ನಂತರ ನಾಮಕರಣ ಮುಗಿಸಿಕೊಂಡು ಅದೇ ಆಟೋದಲ್ಲಿ ಕಡೂರಿಗೆ ವಾಪಸ್ಸು ಬದ್ದಿದ್ದು, 1 ನೇ ಆರೋಪಿಯು ಆಟೋ ಚಲಾಯಿಸುತ್ತಿದ್ದರು.

2. ಸದರಿ ಆಟೋದಲ್ಲಿ ಬರುವಾಗ ಹೊಳೆಯ ಹತ್ತಿರ ಆಟೋ ಬಿದ್ದ ನಂತರ ನನಗೆ ಎಚ್ಚರವಾಯಿತು. ನನ್ನ ಬಲಗಣ್ಣಿಗೆ ಮತ್ತು ತಲೆಗೆ ಸ್ವಲ್ಪ ಪೆಟ್ಟಾಗಿತ್ತು. ಮೃತ ಮಲ್ಲಮ್ಮಳಿಗೆ ಏನು ಗಾಯವಾಗಿತ್ತು ಎಂದು ನನಗೆ ಗೊತ್ತಿಲ್ಲ. ಚಾಸಾ–12 ರವರಿಗೆ ಗಾಯವಾಗಿತ್ತು. ನಂತರ 1 ನೇ ಆರೋಪಿ ಆಂಬ್ಯುಲೆನ್ಸ್‌ಗೆ ಕರೆ ಮಾಡಿ ನಾವೆಲ್ಲರೂ ಆಂಬ್ಯುಲೆನ್ಸ್‌ಲ್ಲಿ ರಟ್ಟೀಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋಗಿ, ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಂತರ ನಮ್ಮ ಮನೆಯವರು ನನ್ನನ್ನು ಊರಿಗೆ ಕರೆದುಕೊಂಡು ಹೋದರು. ನಂತರ ಮಲ್ಲಮ್ಮ ತೀರಿ ಹೋಗಿರುತ್ತಾರೆ ಎಂದು ನನಗೆ ಗೊತ್ತಾಯಿತು.

3. ದೂರನ್ನು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-25 ರಿಂದ 27ರ ಪೋಟೋದಲ್ಲಿರುವ ಆಟೋವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಆಟೋದಲ್ಲಿ ನಾವು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿ 1ರವರೇ ಸದರಿ ಆಟೋ ಚಲಾಯಿಸಿರುತ್ತಾರೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

1. 6 ವರ್ಷಗಳ ಹಿಂದೆ ಎಂದರೆ ದಿನಾಂಕಃ 19.03.2017 ಎಂದರೆ ಸರಿ. ಆ ದಿನ ಆಟೋದಲ್ಲಿ ಚಾಸಾ-6, 9, 10, 12, 13ರವರಲ್ಲದೇ ಚಾಸಾ-1, 7, 11, ಚಾಸಾ-6 ರವರ ಸಂಬಂಧಿಕರ ಮಗಳಾದ ಗಗನ ಮತ್ತು ಚಾಸಾ-1ರವರ ಮಗಳಾದ ಲಿಖಿತಾರವರೂ ಸಹ ನಮ್ಮ ಜೊತೆ ಇದ್ದರು ಎಂದರೆ ಸರಿ. ಸದರಿ ಆಟೋದಲ್ಲಿ ನಾವೆಲ್ಲರೂ ಹಿಂತಿರುಗಿ ಬರುವಾಗ ರಟ್ಟೀಹಳ್ಳಿಯ ಕುಮದ್ವತಿ ಸೇತುವೆ ಹತ್ತಿರ 1 ನೇ ಆರೋಪಿ ಆಟೋವನ್ನು ಅತೀ ಜೋರಾಗಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ.

2. ಕುಮದ್ವತಿ ಸೇತುವೆ ಹತ್ತಿರ ಮೋಟಾರ್ ಸೈಕಲ್ ಚಾಲಕ ಎಡಕ್ಕೆ ಕಟ್ ಮಾಡಿ, ಬಲಕ್ಕೆ ಕಟ್ ಮಾಡಿದ್ದರಿಂದ ಸದರಿ ಆಟೋ ಚಾಲಕ ನಿಯಂತ್ರಣ ತಪ್ಪಿ ಆಟೋ ಪಲ್ಟಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಿಂದ ನನಗೆ ಎಡಮೊಣಕಾಲಿಗೆ ಹೊಡೆತ ಬಿದ್ದಿತ್ತು ಎಂದರೆ ಸರಿ. ಚಾಸಾ-9ರವರ ಬಲಕಿವಿಗೆ, ಚಾಸಾ-1ರವರಗೆ ತಲೆಗೆ, ಬಲಗೈ, ಮೊಣಕೈಗೆ, ಲಿಖಿತಾಳ ಮೈಕೈಗೆ, ಚಾಸಾ-6ರವರ ಬೆನ್ನಿಗೆ, ಚಾಸಾ-7 ರವರಿಗೆ ಬಲಮೊಣಕಾಲಿಗೆ, ತಲೆಗೆ, ಚಾಸಾ-1ರವರ ಬಲಭುಜಕ್ಕೆ, ಚಾಸಾ-11ರವರ ಎಡಕಣ್ಣಿನ ಹುಬ್ಬಿನ ಮೇಲೆ, ಚಾಸಾ-12ರವರ ಎಡಗೈಗೆ, ಮೊಣಕೈಗೆ, ಬಲಹೆಗಲ ಮೇಲೆ, ಬಲಭುಜಕ್ಕೆ ಚಾಸಾ-13ರವರ ತಲೆಗೆ, ಪ್ರಿಯಾಳ ಎಡಗಣ್ಣಿನ ಹತ್ತಿರ, ಬಲಭುಜಕ್ಕೆ ಗಗನಾಳ ಎಡಗೈ ಮೊಣಕೈಗೆ ಮತ್ತು ಮೃತ ಮಲ್ಲಮ್ಮಳ ಎದೆಗೆ, ಬಲ ಪಕ್ಕೆ ಹತ್ತಿರ, ಎಡಗಾಲು ಪಾದದ ಮೇಲೆ, ಬಲಗಾಲಿನ ಮೊಣಕಾಲು ಕೆಳಗೆ ರಕ್ತಗಾಯಗಳಾಗಿದ್ದವು ಎಂದರೆ ಸರಿ. ನಂತರ ಮೃತ ಮಲ್ಲಮ್ಮ, ಚಾಸಾ-6 ಮತ್ತು 12ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಂಬ್ಯುಲೆನ್ಸ್ ಮೂಲಕ ರಾಣೆಬೆನ್ನೂರಿಗೆ ಕರೆದುಕೊಂಡು ಹೋದರು ಎಂದರೆ ಸರಿ.

3. ರಾಣೆಬೆನ್ನೂರಿಗೆ ಹೋಗುವಾಗ ರಟ್ಟೀಹಳ್ಳಿಯ ಶಿವ ಪೆಟ್ರೋಲ್ ಬಂಕ್ ಹತ್ತಿರ ಮಲ್ಲಮ್ಮ ತೀರಿ ಹೋಗಿರುತ್ತಾರೆ ಎಂದರೆ ಸರಿ. ನಂತರ ಮೃತ ಮಲ್ಲಮ್ಮಳನ್ನು ರಟ್ಟೀಹಳ್ಳಿಯ ಶವಗಾರಕ್ಕೆ ಹಾಕಿ, ಇನ್ನುಳಿದ ಗಾಯಾಳುಗಳನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಈ ಬಗ್ಗೆ ಚಾಸಾ-1ರವರು ಆರೋಪಿ 1ರವರ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಅಪಘಾತ ಆರೋಪಿ 1ರವರ ಮತ್ತು ಮೋಟಾರ್ ಸೈಕಲ್ ನಂಬರಃ ಕೆಎ-27/ಇಬಿ-9924 ರ ಮೋಟಾರ್ ಸೈಕಲ್ ಚಾಲಕನಾದ 2ನೇ ಆರೋಪಿಯ ನಿರ್ಲಕ್ಷ್ಯತನದಿಂದ, ಒಮ್ಮೆಲೆ ತನ್ನ ಮೋಟಾರ್ ಸೈಕಲ್‌ನ್ನು ತಿರುಗಿಸಿದ್ದರಿಂದ ಆಟೋ ರಿಕ್ಷಾದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

4. ಸದರಿ ಅಪಘಾತಕ್ಕೆ 2ನೇ ಆರೋಪಿಯೂ ಸಹ ಕಾರಣ ಎಂದು ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ನನಗೆ ಪರಿಚಯ ಇರುತ್ತಾರೆ. ನಾನು ಎಸ್.ಎಸ್.ಎಲ್.ಸಿ.,ವರೆಗೆ ಓದಿರುತ್ತೇನೆ. ಸಾಮಾನ್ಯವಾಗಿ ಆಟೋ ನಿಧಾನವಾಗಿ ಚಲಾಯಿಸಿದಾಗ ಪಲ್ಟಿ ಆಗುವುದಿಲ್ಲ ಎಂದರೆ ಸರಿ. 1ನೇ ಆರೋಪಿಯು ಆ ದಿನ ಆಟೋವನ್ನು ಜೋರಾಗಿ ಚಲಾಯಿಸಿದ್ದರಿಂದ ಅಪಘಾತವಾಗಿದ್ದು, ನನಗೆ ಆರೋಪಿಯ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್‌ನ್ನು ನ್ಯಾಯಾಲಯದ ಮುಂದಿರುವ 2ನೇ ಆರೋಪಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಸದರಿ ವಿಷಯದ ಬಗ್ಗೆ ಹೇಳಿಕೆ ಕೊಟ್ಟಿದ್ದು, ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತಿರಸ್ಕರಿಸಿದ ಹೇಳಿಕೆಯನ್ನು ನಿಪಿ-32 ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲುಃ**</u> 1ನೇ ಆರೋಪಿ ಪರ ಶ್ರೀ. ವಿ.ವಿ.ಎಮ್. ವಕೀಲರಿಂದಃ

1. ನಾವು ಆಟೋದಲ್ಲಿ ಹಿಂತಿರುಗಿ ಬರುವಾಗ ರಟ್ಟೀಹಳ್ಳಿ ದಾಟಿದ ನಂತರ ನಾನು ನಿದ್ದೆಗೆ ಜಾರಿರುತ್ತೇನೆ. ರಟ್ಟೀಹಳ್ಳಿ ಮತ್ತು ಕುಮದ್ವತಿ ನದಿಯ ಸೇತುವೆ ಮಧ್ಯೆ ರಸ್ತೆಯಲ್ಲಿ ಒಂದು 'ಎಸ್' ಆಕಾರದ ಕ್ರಾಸ್ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಅರ್ಧ ಅಡಿಗಿಂತ ಹೆಚ್ಚು ಎತ್ತರದ ಹಂಪ್ಸ್‌ಗಳಿವೆ ಎಂದರೆ ಸರಿ. ನನಗೆ ಎಚ್ಚರವಾದಾಗ ಆಟೋ ರಸ್ತೆಯ ಎಡಬದಿಯಲ್ಲಿ ಬಿದ್ದಿತ್ತು. ಬಿದ್ದಿದ್ದ ಆಟೋವಿನ ಒಂದು ಅಡಿ ಅಂತರದಲ್ಲಿ ಸುಮಾರು 30 ಅಡಿ ಆಳದ ಕುಮದ್ವತಿ ನದಿ ಸೇತುವೆ ಇತ್ತು ಎಂದರೆ ಸರಿ. ಸಾಮಾನ್ಯವಾಗಿ ಸದರಿ ಜಾಗದಲ್ಲಿ ಅಜಾಗರೂಕತೆಯಿಂದ ಆಟೋ ಚಲಾಯಿಸಿದ್ದರೇ ಆಟೋದಲ್ಲಿದ್ದ ಎಲ್ಲರೂ ಸಹ ಸೇತುವೆಯಲ್ಲಿ ಬೀಳುವ ಸಾಧ್ಯತೆ ಇತ್ತು ಎಂದರೆ ಸರಿ. ಆ ದಿನ ಬಹಳ ಜನ ಇರುವುದರಿಂದ ಯಾರ್ಯಾರಿಗೆ ಎಷ್ಟು ಗಾಯ ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**<u>ಪಾಟೀ ಸವಾಲುಃ</u>**2 ನೇ ಆರೋಪಿ ಪರ ಶ್ರೀ. ಯು.ಬಿ.ಜೆ. ಪರ ಶ್ರೀ. ಸಿ.ಹೆಚ್.ಪಿ. ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 117/2018**

ಸಿಡಬ್ಲ್ಯೂಃ 9

ಪಿಡಬ್ಲ್ಯೂಃ 8

| | | |
|---|---|---|
| ಸಾಕ್ಷಿಯ ಹೆಸರು | : | ವನಿತಾ ಸಾವುಕಾರ |
| ಗಂಡನ ಹೆಸರು | : | ಹನುಮಂತಗೌಡ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಡೂರು |

ಇಂದು ದಿನಾಂಕಃ 29.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಚಾಸಾ-6 ರಿಂದ 8 ಮತ್ತು 10 ರಿಂದ 13 ರವರು ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. 1 ನೇ ಆರೋಪಿಯು ಆಟೋ ಡ್ರೈವರ್ ಇರುತ್ತಾರೆ. ಮೃತ ಮಲ್ಲಮ್ಮ ನನಗೆ ಗೊತ್ತು. ಸುಮಾರು 6 ವರ್ಷಗಳ ಹಿಂದೆ ಚಾಸಾ-6 ರವರು ಮಗನ ನಾಮಕರಣ ಕಾರ್ಯಕ್ರಮಕ್ಕೆ ಚಾಸಾ-6 ರವರು ಮಾಡಿದ ಬಾಡಿಗೆ ಆಟೋದಲ್ಲಿ ನಾನು, ಚಾಸಾ-8 ರವರ ಮಗಳಾದ ಪೂರ್ವಿಕಾ, ಮೃತ ಮಲ್ಲಮ್ಮ, ಚಾಸಾ-6, 8, 10, 12, 13 ರವರು ಅಬಲೂರಿಗೆ ಹೋಗಿದ್ದೆವು. ನಂತರ ನಾಮಕರಣ ಮುಗಿಸಿಕೊಂಡು ಅದೇ ಆಟೋದಲ್ಲಿ ಕಡೂರಿಗೆ ವಾಪಸ್ಸು ಬದ್ದಿದ್ದು, 1 ನೇ ಆರೋಪಿಯು ಆಟೋ ಚಲಾಯಿಸುತ್ತಿದ್ದರು.

2. ಸದರಿ ಆಟೋದಲ್ಲಿ ಬರುವಾಗ ಹೊಳೆಯ ಹತ್ತಿರ ಆಟೋ ಬಿದ್ದ ನಂತರ ನನಗೆ ಎಚ್ಚರವಾಯಿತು. ನನಗೆ ಎಡಕಿವಿಗೆ ಗಾಯವಾಗಿ ರಕ್ತ ಬಂದಿತ್ತು. ಮೃತ ಮಲ್ಲಮ್ಮಳಿಗೆ ಏನು ಗಾಯವಾಗಿತ್ತು ಎಂದು ನನಗೆ ಗೊತ್ತಿಲ್ಲ. ಚಾಸಾ-12 ರವರಿಗೆ ಗಾಯವಾಗಿತ್ತು. ನಂತರ 1 ನೇ ಆರೋಪಿ ಆಂಬ್ಯುಲೆನ್ಸ್‌ಗೆ ಕರೆ ಮಾಡಿ ನಾವೆಲ್ಲರೂ ಆಂಬ್ಯುಲೆನ್ಸ್‌ಲ್ಲಿ ರಟ್ಟೀಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋಗಿ, ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಂತರ ನನ್ನ ಅಣ್ಣ ನನ್ನನ್ನು ಊರಿಗೆ ಕರೆದುಕೊಂಡು ಹೋದರು. ನಂತರ ಮಲ್ಲಮ್ಮ ತೀರಿ ಹೋಗಿರುತ್ತಾರೆ ಎಂದು ನನಗೆ ಗೊತ್ತಾಯಿತು.

3. ದೂರನ್ನು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-25 ರಿಂದ 27ರ ಪೋಟೋದಲ್ಲಿರುವ ಆಟೋವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಆಟೋದಲ್ಲಿ ನಾವು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿ 1ರವರೇ ಸದರಿ ಆಟೋ ಚಲಾಯಿಸಿರುತ್ತಾರೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

1. 6 ವರ್ಷಗಳ ಹಿಂದೆ ಎಂದರೆ ದಿನಾಂಕಃ 19.03.2017 ಎಂದರೆ ಸರಿ. ಆ ದಿನ ಆಟೋದಲ್ಲಿ ಚಾಸಾ-6, 8, 10, 12, 13ರವರಲ್ಲದೇ ಚಾಸಾ-1, 7, 11, ಚಾಸಾ-6 ರವರ ಸಂಬಂಧಿಕರ ಮಗಳಾದ ಗಗನ ಮತ್ತು ಚಾಸಾ-1ರವರ ಮಗಳಾದ ಲಿಖಿತಾರವರೂ ಸಹ ನಮ್ಮ ಜೊತೆ ಇದ್ದರು ಎಂದರೆ ಸರಿ. ಸದರಿ ಆಟೋದಲ್ಲಿ ನಾವೆಲ್ಲರೂ ಹಿಂತಿರುಗಿ ಬರುವಾಗ ರಟ್ಟೀಹಳ್ಳಿಯ ಕುಮದ್ವತಿ ಸೇತುವೆ ಹತ್ತಿರ 1ನೇ ಆರೋಪಿ ಆಟೋವನ್ನು ಅತೀ ಜೋರಾಗಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ.

2. ಕುಮದ್ವತಿ ಸೇತುವೆ ಹತ್ತಿರ ಮೋಟಾರ್ ಸೈಕಲ್ ಚಾಲಕ ಎಡಕ್ಕೆ ಕಟ್ ಮಾಡಿ, ಬಲಕ್ಕೆ ಕಟ್ ಮಾಡಿದ್ದರಿಂದ ಸದರಿ ಆಟೋ ಚಾಲಕ ನಿಯಂತ್ರಣ ತಪ್ಪಿ ಆಟೋ ಪಲ್ಟಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಿಂದ ನನಗೆ ಬಲಕಿವಿಗೆ ಎಂದರೆ ಸರಿ. ಚಾಸಾ-8ರವರ ಎಡಮೊಣಕಾಲಿಗೆ, ಚಾಸಾ-1ರವರಗೆ ತಲೆಗೆ, ಬಲಗೈ, ಮೊಣಕೈಗೆ, ಲಿಖಿತಾಳ ಮೈಕೈಗೆ, ಚಾಸಾ-6ರವರ ಬೆನ್ನಿಗೆ, ಚಾಸಾ-7 ರವರಿಗೆ ಬಲಮೊಣಕಾಲಿಗೆ, ತಲೆಗೆ, ಚಾಸಾ-1ರವರ ಬಲಭುಜಕ್ಕೆ, ಚಾಸಾ-11ರವರ ಎಡಕಣ್ಣಿನ ಹುಬ್ಬಿನ ಮೇಲೆ, ಚಾಸಾ-12ರವರ ಎಡಗೈಗೆ, ಮೊಣಕೈಗೆ, ಬಲಹೆಗಲ ಮೇಲೆ, ಬಲಭುಜಕ್ಕೆ ಚಾಸಾ-13ರವರ ತಲೆಗೆ, ಪ್ರಿಯಾಳ ಎಡಗಣ್ಣಿನ ಹತ್ತಿರ, ಬಲಭುಜಕ್ಕೆ ಗಗನಾಳ ಎಡಗೈ ಮೊಣಕೈಗೆ ಮತ್ತು ಮೃತ ಮಲ್ಲಮ್ಮಳ ಎದೆಗೆ, ಬಲ ಪಕ್ಕೆ ಹತ್ತಿರ, ಎಡಗಾಲು ಪಾದದ ಮೇಲೆ, ಬಲಗಾಲಿನ ಮೊಣಕಾಲು ಕೆಳಗೆ ರಕ್ತಗಾಯಗಳಾಗಿದ್ದವು ಎಂದರೆ ಸರಿ. ನಂತರ ಮೃತ ಮಲ್ಲಮ್ಮ, ಚಾಸಾ-6 ಮತ್ತು 12ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಂಬ್ಯುಲೆನ್ಸ್ ಮೂಲಕ ರಾಣೆಬೆನ್ನೂರಿಗೆ ಕರೆದುಕೊಂಡು ಹೋದರು ಎಂದರೆ ಸರಿ.

3. ರಾಣೆಬೆನ್ನೂರಿಗೆ ಹೋಗುವಾಗ ರಟ್ಟೀಹಳ್ಳಿಯ ಶಿವ ಪೆಟ್ರೋಲ್ ಬಂಕ್ ಹತ್ತಿರ ಮಲ್ಲಮ್ಮ ತೀರಿ ಹೋಗಿರುತ್ತಾರೆ ಎಂದರೆ ಸರಿ. ನಂತರ ಮೃತ ಮಲ್ಲಮ್ಮಳನ್ನು ರಟ್ಟೀಹಳ್ಳಿಯ ಶವಗಾರಕ್ಕೆ ಹಾಕಿ, ಇನ್ನುಳಿದ ಗಾಯಾಳುಗಳನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಈ ಬಗ್ಗೆ ಚಾಸಾ-1 ರವರು ಆರೋಪಿ 1 ರವರ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಅಪಘಾತ ಆರೋಪಿ 1 ರವರ ಮತ್ತು ಮೋಟಾರ್ ಸೈಕಲ್ ನಂಬರಃ ಕೆಎ-27/ಇಬಿ-9924 ರ ಮೋಟಾರ್ ಸೈಕಲ್ ಚಾಲಕನಾದ 2 ನೇ ಆರೋಪಿಯ ನಿರ್ಲಕ್ಷ್ಯತನದಿಂದ, ಒಮ್ಮೆಲೆ ತನ್ನ ಮೋಟಾರ್ ಸೈಕಲ್‌ನ್ನು ತಿರುಗಿಸಿದ್ದರಿಂದ ಆಟೋ ರಿಕ್ಷಾದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

4. ಸದರಿ ಅಪಘಾತಕ್ಕೆ 2 ನೇ ಆರೋಪಿಯೂ ಸಹ ಕಾರಣ ಎಂದು ನಾನು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಪರಿಚಯ ಇರುತ್ತಾರೆ. ನಾನು 8 ನೇ ತರಗತಿವರೆಗೆ ಓದಿರುತ್ತೇನೆ. ಸಾಮಾನ್ಯವಾಗಿ ಆಟೋ ನಿಧಾನವಾಗಿ ಚಲಾಯಿಸಿದಾಗ ಪಲ್ಟಿ ಆಗುವುದಿಲ್ಲ ಎಂದರೆ ಸರಿ. 1 ನೇ ಆರೋಪಿಯು ಆ ದಿನ ಆಟೋವನ್ನು ಜೋರಾಗಿ ಚಲಾಯಿಸಿದ್ದರಿಂದ ಅಪಘಾತವಾಗಿದ್ದು, ನನಗೆ ಆರೋಪಿಯ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್‌ನ್ನು ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಸದರಿ ವಿಷಯದ ಬಗ್ಗೆ ಹೇಳಿಕೆ ಕೊಟ್ಟಿದ್ದು, ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತಿರಸ್ಕರಿಸಿದ ಹೇಳಿಕೆಯನ್ನು ನಿಪಿ-33 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** 1 ನೇ ಆರೋಪಿ ಪರ ಶ್ರೀ. ವಿ.ವಿ.ಎಮ್. ವಕೀಲರಿಂದಃ

1. ನಾವು ಆಟೋದಲ್ಲಿ ಹಿಂತಿರುಗಿ ಬರುವಾಗ ರಟ್ಟೀಹಳ್ಳಿ ದಾಟಿದ ನಂತರ ನಾನು ನಿದ್ದೆಗೆ ಜಾರಿರುತ್ತೇನೆ. ರಟ್ಟೀಹಳ್ಳಿ ಮತ್ತು ಕುಮದ್ವತಿ ನದಿಯ ಸೇತುವೆ ಮಧ್ಯೆ ರಸ್ತೆಯಲ್ಲಿ ಒಂದು 'ಎಸ್' ಆಕಾರದ ಕ್ರಾಸ್ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಅರ್ಧ ಅಡಿಗಿಂತ ಹೆಚ್ಚು ಎತ್ತರದ ಹಂಪ್ಸ್‌ಗಳಿವೆ ಎಂದರೆ ಸರಿ. ನನಗೆ ಎಚ್ಚರವಾದಾಗ ಆಟೋ ರಸ್ತೆಯ ಎಡಬದಿಯಲ್ಲಿ ಬಿದ್ದಿತ್ತು. ಬಿದ್ದಿದ್ದ ಆಟೋವಿನ ಒಂದು ಅಡಿ ಅಂತರದಲ್ಲಿ ಸುಮಾರು 30 ಅಡಿ ಆಳದ ಕುಮದ್ವತಿ ನದಿ ಸೇತುವೆ ಇತ್ತು ಎಂದರೆ ಸರಿ. ಸಾಮಾನ್ಯವಾಗಿ ಸದರಿ ಜಾಗದಲ್ಲಿ ಅಜಾಗರೂಕತೆಯಿಂದ ಆಟೋ ಚಲಾಯಿಸಿದ್ದರೇ ಆಟೋದಲ್ಲಿದ್ದ ಎಲ್ಲರೂ ಸಹ ಸೇತುವೆಯಲ್ಲಿ ಬೀಳುವ ಸಾಧ್ಯತೆ ಇತ್ತು ಎಂದರೆ ಸರಿ. ಆ ದಿನ ಬಹಳ ಜನ ಇರುವುದರಿಂದ ಯಾರ್ಯಾರಿಗೆ ಎಷ್ಟು ಗಾಯ ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ**2 ನೇ ಆರೋಪಿ ಪರ ಶ್ರೀ. ಯು.ಬಿ.ಜೆ. ಪರ ಶ್ರೀ. ಸಿ.ಹೆಚ್.ಪಿ. ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.